ಅರಿವು ಮೂಡಿಸಲು ತೆಂಗು ಬೆಳೆಯುವ ಎಲ್ಲಾ ಜಿಲ್ಲೆಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಾತ್ಯಕ್ಷತೆ ಕಾರ್ಯಕ್ರಮಕ್ಕೆ ಬೇಕಾದ ಪೋಷಕಾಂಶಗಳು ಹಾಗೂ ಜೈವಿಕ ಕೀಟನಾಶಕಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗಿದೆ ತೆಂಗಿನ ನುಸಿ ಪೀಡೆ ಹತೋಟಿ ಬಗ್ಗೆ ಕರಪತ್ರಗಳ ಮೂಲಕ, ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ, ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. ಈ ಕೀಟದ ಹತೋಟಿಗೆ ಜೈವಿಕ ನಿಯಂತ್ರಣ (ಶೀಲೀಂಧ್ರ) ಬಳಸುವ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಪ್ರಯೋಗಾಲಯಗಳಲ್ಲಿ ಉತ್ತಮ ಫಲಿತಾಂಶ ದೊರೆತಿದೆ. ಭಾರತ ಸರ್ಕಾರದ Project Directorate of biological Control ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರುಗಳಲ್ಲಿ ಕೈಗೊಂಡ ಸಂಶೋಧನೆ ಫಲಿತಾಂಶದನ್ವಯ ಕ್ಷೇತ್ರಮಟ್ಟದಲ್ಲಿ ಪ್ರಯೋಗಗಳನ್ನು ಕೈಗೊಳ್ಳಲಾಗುತ್ತಿದೆ.

127 (262) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) (ಮಾನ್ಯ ಕೃಷಿ ಸಚಿವರು)ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳೆಷ್ಟು;

ಆ. ಇವುಗಳು ಯಾವ ಸ್ಥಳೀಗಳಲ್ಲಿ ಸ್ಥಾಪನೆಯಾಗಿವೆ;

ಇ. ಸದರಿ ಕೇಂದ್ರಗಳ ಸ್ಥಾಪನೆಯ ಉದ್ದೇಶವೇನು?

ಶ್ರೀ ಬಂಡೆಪ್ಪಾ ಕಾಶಂಪೂರ್ (ಕೃಷಿ ಸಚಿವರು) :

ಅ. ರಾಜ್ಯದಲ್ಲಿ 745 ರೈತ ಸಂಪರ್ಕ ಕೇಂದ್ರಗಳಿವೆ.

ಆ. ಇವುಗಳನ್ನು ಹೋಬಳಿಗೊಂದರಂತೆ ಸ್ಥಾಪಿಸಲಾಗಿದೆ.

ಇ. ರೈತ ಸಂಪರ್ಕ ಕೇಂದ್ರಗಳನ್ನು ಈ ಮುಂದಿನ ಉದ್ದೇಶಗಳೊಂದಿಗೆ ಸ್ಥಾಪಿಸಲಾಗಿದೆ.

1. ಬೆಳೆ ಆಯ್ಕೆ, ಬೆಳೆ ಉತ್ಪಾದನೆ ಮತ್ತು ಮಾರುಕಟ್ಟೆ ಮುಂತಾದ ವಿಷಯಗಳ ಬಗ್ಗೆ ಆಧುನಿಕ ಮಾಹಿತಿ ಒದಗಿಸುವುದು.

2. ಪ್ರಮುಖ ಕೃಷಿ ಪರಿಕರಗಳಾದ ಬೀಜ, ಜೈವಿಕ ಗೊಬ್ಬರ ಮತ್ತು ಸೂಕ್ಷ್ಮ ಪೋಷಕಾಂಶ ಮುಂತಾದವುಗಳನ್ನು ಸ್ಥಳೀಯವಾಗಿ ಲಭ್ಯವಾಗಿಸುವಂತೆ ಸಂಯೋಜನೆ ಮಾಡುವುದು.

3. ಬೀಜ ಮತ್ತು ಮಣ್ಣು ಮಾದರಿ ಪರೀಕ್ಷೆ ಸೌಲಭ್ಯ ಒದಗಿಸುವುದು.

4. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ/ಪರಿಕರಗಳ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.

5. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ತಂತ್ರಜ್ಞಾನ/ಪರಿಕರಗಳ ಅಳವಡಿಕೆಗೆ ಒದಗಿಸುವುದು.

* * * *